**ಹೆಂಡತಿ:** ರೀ... ನಾನು ಮೂರು ಗಂಟೆಗಳ ಕಾಲ ಹೊರಗೆ ಹೋಗ್ತಿದ್ದೀನಿ. ನಿಮಗೇನಾದರೂ ಬೇಕಾ?
**ಗಂಡ:** ನನಗಷ್ಟೇ ಸಾಕು ಕಣೇ!

***

**ಹೆಂಡತಿ:** ನೀವು ಯಾವಾಗಲೂ ನಮ್ಮ ತವರು ಮನೆಯವರನ್ನ ಬೈಯೋದೇ ಆಯ್ತು. ಬೈಯೋದಿದ್ರೆ ನನ್ನನ್ನೇ ಬೈಯ್ಯಿರಿ.
**ಗಂಡ:** ನೋಡು ಟಿ.ವಿ. ಕೆಟ್ಟರೆ ಟಿ.ವಿ.ಗಾ ಬೈತೀವಿ, ಟಿ.ವಿ. ಕಂಪನಿಯವರೇ ತಾನೇ ಜಾಸ್ತಿ ಬೈಸಿಕೊಳ್ಳೋದು?

***

**ಡಾಕ್ಟರ್:** ಚರಂಡಿ ಒಳಗೆ ಹೆಂಗೆ ಬಿದ್ಯೋ ಮಾರಾಯಾ?
**ಕುಡುಕ:** ಚರಂಡಿ ಮುಚ್ಚಳ ಓಪನ್ ಇತ್ತು. ಅದು 'ಸೋಷಿಯಲ್ ಡಿಸ್ಟೆನ್ಸ್' ಸರ್ಕಲ್ ಅಂತ ಕಾಲಿಟ್ಟೆ ಡಾಕ್ಟ್ರೇ!

***

**ಮಗಳು:** ಅಮ್ಮಾ, ಎಡವಿ ಬಿದ್ದು ಪೆಟ್ಟಾಯಿತು. ಕಾಲಲ್ಲಿ ರಕ್ತ ಸುರಿಯುತ್ತಿದೆ. ಏನು ಮಾಡಲಿ?
**ತಾಯಿ:** ಫೋಟೊ ತೆಗೆದು ಸ್ಟೇಟಸ್ ಹಾಕು.

***

**ಗುಂಡ:** ನಾನು ಸಂಸ್ಕೃತ ಕಲಿಯುತ್ತಿದ್ದೇನೆ. ನನ್ನ ಹೆಂಡತಿಗೂ ಕಲಿಸುತ್ತಿದ್ದೇನೆ.
**ತಿಮ್ಮ:** ಇದ್ದಕ್ಕಿದ್ದಂತೆ ಅದರ ಮೇಲೆ ಯಾಕೇ ಆಸಕ್ತಿ ಬಂತು?
**ಗುಂಡ:** ನಾವಿಬ್ರೂ ಜಗಳವಾಡ್ತಿದ್ದರೆ ಅಕ್ಕ–ಪಕ್ಕದ ಮನೆಯವರು ಪೂಜೆ ಮಾಡ್ತಿದ್ದಾರೆ ಅಂದ್ಕೊಬೇಕು ಅದಕ್ಕೆ!

***

**ಸುಬ್ಬ:** ನಿನ್ನ ಲವ್ ಮಾಡಿದ ದಿನದಿಂದ ಒಂದೇ ಒಂದು ಸಿಗರೇಟ್ ಸೇದಿಲ್ಲ, ಕುಡಿದಿಲ್ಲ ಗೊತ್ತಾ?
**ಸುಬ್ಬಿ:** 'ಸೀ ಸ್ವೀಟ್ ಆಫ್ ಯು'. ಎಷ್ಟೊಂದು ಡೀಪಾಗಿ ನನ್ನ ಪ್ರೀತಿಸುತ್ತಿದ್ದೀಯ... ಆ ಕೆಟ್ಟ ಅಭ್ಯಾಸಗಳನ್ನು ಬಿಡ್ಬಿಡ್ತೀಯಾ?
**ಸುಬ್ಬ:** 'ಶಟ್ ಅಪ್'. ನಿನ್ನ ಲವ್ ಮಾಡಿದಾಗಿನಿಂದ ನನ್ನ ಪರ್ಸ್ ಖಾಲಿ ಖಾಲಿ. ಇನ್ನು ಸೇದೊದು, ಕುಡಿಯೋದು ಎಲ್ಲಿಂದ ಬಂತು?

***

'ಕಮಿಷನ್ ಕೇಳಿದ್ದಕ್ಕೆ ಪಂಜಾಬಿನಲ್ಲಿ ಮಂತ್ರಿ ಮನೆಗೆ'




ನಮ್ಮ ಕರ್ನಾಟಕದಲ್ಲಿ ಆಗಿದ್ರೆ ಪೂರಾ ವಿಧಾನಸೌಧವೇ ಖಾಲಿ ಆಗಿಬಿಡ್ತಿತ್ತು ಅಲ್ವೇನ್ರೀ?

**ಗಂಡ:** (ಹೆಂಡತಿಗೆ ಕರೆ ಮಾಡಿ) ನಾನು ಆಸ್ಪತ್ರೆಯಲ್ಲಿದ್ದೇನೆ. ಬರುವಾಗ ದೊಡ್ಡ ಲಾರಿ ಗುದ್ದಿತು. ಲಾರಿಯ ಅಡಿ ನಾನು ಹೋಗಿಬಿಟ್ಟಿದ್ದೆ. ಏನೋ ನಿನ್ನ ಪುಣ್ಯ ಒಳ್ಳೆದಿತ್ತು. ಶೀಲಾ ನನ್ನ ಆಸ್ಪತ್ರೆಗೆ ಸೇರಿಸಿದಳು. ಹೆಲ್ಮೆಟ್ ಇದ್ದುದರಿಂದ ನಾನು ಬದುಕಿದೆ. ಕಾಲು ಮೂರು ಕಡೆ ಫ್ರಾಕ್ಚರ್ ಆಗಿದೆ. ಬೆನ್ನು ಚರ್ಮ ಕಿತ್ತು ಗಾಯ ಆಗಿದೆ. ಎಡ ಕೈ ಮುರಿದಿದೆ. ಡಾಕ್ಟರ್ ಆಪರೇಷನ್ ಮಾಡಿದ್ದಾರೆ. ಈಗ ವಾರ್ಡಿಗೆ ಹಾಕಿದ್ದಾರೆ. ಜೀವಕ್ಕೇನೂ ಅಪಾಯ ಇಲ್ಲ ಅಂತೆ.
**ಹೆಂಡತಿ ಕೇಳಿದಳು:** 'ಶೀಲಾ ಯಾರು'?

***

**ಗುಂಡನ ಮಗಳು:** ನಿನ್ನ ಅಳಿಯ ಮೋಸ ಮಾಡಿಬುಟ್ಟ ಅಪ್ಪ. ಅವನು ದೊಡ್ಡ ಕುಡುಕ.
**ಗುಂಡ:** ಬೇಸರ ಮಾಡಿಕೊಳ್ಳಬೇಡ ಮಗಳೆ. ನಂಗೆ ಅವನು ಪರಿಚಯ ಆಗಿದ್ದೇ ಬಾರ್‌ನಲ್ಲಿ.

***

**ಗುಂಡ:** ಗುಲಾಬಿ ಗಿಡ ನೆಟ್ಟು ಒಂದು ತಿಂಗಳಾದ್ರೂ ಬೇರು ಬಿಟ್ಟೇ ಇಲ್ಲ?
**ಅಪ್ಪ:** ಗಿಡ ಬೇರು ಬಿಟ್ಟಿಲ್ಲ ಅಂತ ನಿನಗೆ ಹೇಗೆ ಗೊತ್ತು?
**ಗುಂಡ:** ನಾನು ದಿನಾ ಆ ಗಿಡವನ್ನು ಕಿತ್ತು ಕಿತ್ತು ನೋಡ್ತಿದ್ದೀನಿ...

***

**ಗುಂಡ:** ಅಪ್ಪ ಹೊರಗೆ ಯಾರೋ ಚಂದಾ ಕೇಳಿಕೊಂಡು ಬಂದಿದ್ದಾರೆ.
**ಅಪ್ಪ:** ಯಾವುದಕ್ಕೆ?
**ಗುಂಡ:** ಸ್ವಿಮ್ಮಿಂಗ್ ಪೂಲ್ ಕಟ್ಟಿಸ್ತಾರಂತೆ.
**ಅಪ್ಪ:** ಒಂದು ಚೆಂಬು ನೀರು ಕೊಟ್ಟು ಕಳಿಸು.

***

**ಗುಂಡ:** ನಾನು ಎಲ್‌ಎಲ್‌ಬಿ ಓದಬೇಕು ಅಂದುಕೊಂಡಿದ್ದೆ.
**ತಿಮ್ಮ:** ಮತ್ಯಾಕೆ ಓದಲಿಲ್ಲ?
**ಗುಂಡ:** ಕಾನೂನು ಕೈಗೆ ತಗೋಬಾರದು ಅಂತ ಓದಲಿಲ್ಲ ಅಷ್ಟೇ!

***

**ಹೆಂಡತಿ:** ರೀ... ಹೀಗೆ ಟಿ.ವಿ. ನೋಡ್ತಾ ಊಟ ಮಾಡಿದರೆ, ಊಟದ ರುಚಿ ಹೇಗೆ ಗೊತ್ತಾಗುತ್ತೆ?
**ಗಂಡ:** ಊಟ ರುಚಿಯಾಗಿದ್ದರೆ, ನಾನ್ಯಾಕೆ ಟಿ.ವಿ. ನೋಡುತ್ತಿದ್ದೆ?


***

**ಹೆಂಡತಿ:** ರೀ... ಬರ್ತಡೇಗೆ ನಾನು ನಿಮಗೆ ಏನು ಗಿಫ್ಟ್ ಕೊಡಲಿ?
**ಗಂಡ:** ಏನೂ ಬೇಡ. ರೆಸ್ಪೆಕ್ಟ್ ಕೊಟ್ಟರೆ ಸಾಕು.
**ಹೆಂಡತಿ:** ಅದೆಲ್ಲ ಆಗೊಲ್ಲ. ನಾನು ಗಿಫ್ಟನ್ನೇ ಕೊಡ್ತೀನಿ. ಏನ್ ಗಿಫ್ಟ್ ಅಂತ ಹೇಳಿ?

***

**ಸೇಲ್ಸ್ ಮ್ಯಾನ್:** ನೋಡಿ ಮೇಡಂ, ಇದು ಒಳ್ಳೆ ಕ್ವಾಲಿಟಿ ಬಟ್ಟೆ.
**ಮಹಿಳೆ:** ಕಲರ್ ಹೋಗಲ್ಲ ತಾನೇ?
**ಸೇಲ್ಸ್ ಮ್ಯಾನ್:** ಇಲ್ಲ ಮೇಡಂ, ಕಲರ್ ಬಕೆಟ್‌ನಲ್ಲೇ ಇರುತ್ತೆ.

–ಶರದ ಕುಲಕರ್ಣಿ, ಬೀದರ್

ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ, ಪಂಚ ಮಹಾ ಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ಮದುವೆ, ಸಂತಾನ, ದಾಂಪತ್ಯ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ, ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಇನ್ನಿತರ ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ.
ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
9880444450